## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018–19ನೇ ಸಾಲಿನ ಜುಲೈ ಆಯವ್ಯಯ ಭಾಷಣದ ಕಂಡಿಕೆ–20 ರಲ್ಲಿ ಘೋಷಣೆಯಾಗಿರುವ ಹೊಸ ಕಾರ್ಯಕ್ರಮ ವಲಯವಾರು ಬೆಳೆ ಯೋಜನೆ ಅನುಷ್ಠಾನಕ್ಕೆ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ:
1. 2018–19ನೇ ಸಾಲಿನ ಜುಲೈ ಆಯವ್ಯಯ ಭಾಷಣ ಕಂಡಿಕೆ–20.
2. ಸರ್ಕಾರದ ಆದೇಶ ಸಂಖ್ಯೆ: ಕೃಇ 85 ಕೃಮಸ 2018, ದಿನಾಂಕ: 24–08–2018
3. ದಿನಾಂಕ 30–11–2018 ರಂದು ಸರ್ಕಾರ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಲಯವಾರು ಬೆಳೆ ಯೋಜನೆ ಕಾರ್ಯಕ್ರಮದ ಅನುಷ್ಠಾನ ಕುರಿತು ಜರುಗಿದ ಸಭೆಯ ನಡವಳಿಗಳು.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, 2018–19ನೇ ಸಾಲಿನ (ಜುಲೈ–2018) ಆಯವ್ಯಯ ಭಾಷಣದ ಕಂಡಿಕೆ–20 ರಲ್ಲಿ "ರಾಜ್ಯದಲ್ಲಿ ಒಟ್ಟು 10 ಕೃಷಿ ಹವಾಮಾನ ವಲಯಗಳಿದ್ದು, ಐದು ಬಗೆಯ ಮಣ್ಣುಗಳು ವಿಭಿನ್ನವಾದ ಮಳೆ ಹಂಚಿಕೆ ಹಾಗೂ ಭೂಮೇಲ್ಮೈ ಲಕ್ಷಣಗಳಿಂದ ಕೂಡಿರುತ್ತದೆ. ಈ ವಲಯಗಳಲ್ಲಿ ಬೆಳೆ ಪದ್ಧತಿ ವೈವಿಧ್ಯತೆಯಿಂದ ಕೂಡಿದ್ದು, ವಿವಿಧ ಆಹಾರ ಮತ್ತು ತೋಟಗಾರಿಕೆ ಬೆಳೆಗಳ ಬೇಸಾಯಕ್ಕೆ ಉತ್ತಮ ವಾತಾವರಣವಿದೆ. ಅದಕ್ಕೆ ತಕ್ಕಂತೆ ಬೆಳೆ ಯೋಜನೆಯನ್ನು ರೂಪಿಸಿ, ಕೃಷಿ ಉತ್ಪಾದನೆ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಸುಸ್ಥಿರತೆ ಕಾಪಾಡುವ ಮೂಲಕ ಕೃಷಿಯನ್ನು ಲಾಭದಾಯಕ ಉದ್ದಿಮೆಯನ್ನಾಗಿ ಮಾಡಲಾಗುವುದು" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ "ರಾಜ್ಯದಲ್ಲಿರುವ ಒಟ್ಟು 10 ಕೃಷಿ ಹವಾಮಾನ ವಲಯಗಳಲ್ಲಿ ಬೆಳೆ ಪದ್ಧತಿಯು ವೈವಿಧ್ಯತೆಯಿಂದ ಕೂಡಿರುವುದರಿಂದ ಮಳೆ ಹಂಚಿಕೆ ಹಾಗೂ ಭೂಮೇಲ್ಮೈ ಲಕ್ಷಣಗಳಿಗೆ ತಕ್ಕಂತೆ ಬೆಳೆ ಯೋಜನೆಯನ್ನು ರೂಪಿಸಿ, ಕೃಷಿ ಉತ್ಪಾದನೆ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಸುಸ್ಥಿರತೆ ಕಾಪಾಡಲು ವಲಯವಾರು ಬೆಳೆ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (3) ರಂತೆ, ದಿನಾಂಕ 30–12–2018 ರಂದು ಸರ್ಕಾರ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ 2018–19ರ ಆಯವ್ಯಯದಲ್ಲಿ ಘೋಷಿಸಿರುವಂತೆ ವಲಯವಾರು ಬೆಳೆ ಯೋಜನೆ ಕಾರ್ಯಕ್ರಮವನ್ನು ತಾಂತ್ರಿಕ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಒಂದು ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಅದರಂತೆ, ಈ ಕೆಳಗಿನ ಆದೇಶ.

..2)

**ಸರ್ಕಾರದ ಆದೇಶ ಸಂಖ್ಯೆ: ಕೃಇ 85 ಕೃಮಸ 2018, ಬೆಂಗಳೂರು, ದಿನಾಂಕ: 01-02-2019**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, 2018-19ನೇ ಸಾಲಿನ ಜುಲೈ ಆಯವ್ಯಯ ಭಾಷಣದ ಕಂಡಿಕೆ-20 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವಂತೆ ರಾಜ್ಯದ 10 ಕೃಷಿ ಹವಾಮಾನ ವಲಯವಾರು ಬೆಳೆ ಯೋಜನೆಯನ್ನು ಪರಿಣಾಮಕಾರಿಯಾಗಿ ರೂಪಿಸುವ ಹಾಗೂ ಆ ಮೂಲಕ ಕೃಷಿ ಉತ್ಪಾದನೆ ಹೆಚ್ಚಿಸಿ, ಮಾರುಕಟ್ಟೆಯಲ್ಲಿ ಬೆಲೆ ಸುಸ್ಥಿರತೆ ಕಾಪಾಡುವ ಕುರಿತು ಪರಿಶೀಲಿಸಿ / ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವ ಸಲುವಾಗಿ, ಈ ಕೆಳಕಂಡಂತೆ ಸಮಿತಿ ರಚಿಸಲಾಗಿದೆ.

| ಕ್ರ ಸಂ. | ಹುದ್ದೆ | ವಿವರ |
|---|---|---|
| 1 | ಆಯುಕ್ತರು, ಕೃಷಿ ಇಲಾಖೆ | ಅಧ್ಯಕ್ಷರು |
| 2 | ಆಯುಕ್ತರು, ರೇಷ್ಮೆ ಇಲಾಖೆ | ಸದಸ್ಯರು |
| 3 | ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 4 | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 5 | ನಿರ್ದೇಶಕರು, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ | ಸದಸ್ಯರು |
| 6 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು | ಸದಸ್ಯರು |
| 7 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ | ಸದಸ್ಯರು |
| 8 | ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು | ಸದಸ್ಯರು |
| 9 | ಸಂಶೋಧನಾ ನಿರ್ದೇಶಕರು, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ, ಶಿವಮೊಗ್ಗ | ಸದಸ್ಯರು |
| 10 | ಸಂಶೋಧನಾ ನಿರ್ದೇಶಕರು, ತೋಟಗಾರಿಕಾ ವಿಶ್ವವಿದ್ಯಾನಿಲಯ, ಬಾಗಲಕೋಟೆ | ಸದಸ್ಯರು |
| 11 | ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು | ಸದಸ್ಯರು |
| 12 | ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು | ಸದಸ್ಯರು |
| 13 | ಶ್ರೀ ರಾಜೇಗೌಡ, ಸಮನ್ವಯಾಧಿಕಾರಿ, ಕೃಷಿ ಸಚಿವಾಲಯ | ಸದಸ್ಯರು |
| 14 | ಅಪರ ಕೃಷಿ ನಿರ್ದೇಶಕರು, (ಬೆಳೆ ಅಭಿವೃದ್ಧಿ ಮತ್ತು ಯೋಜನೆ) | ಸದಸ್ಯ ಕಾರ್ಯದರ್ಶಿ |

ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು:

1. ಕೃಷಿ ಹವಾಮಾನ ವಲಯಕ್ಕೆ ತಕ್ಕಂತೆ ಕೃಷಿ ಹವಾಮಾನ ಆಧಾರಿತ ಸೂಕ್ತ ಬೆಳೆ ಪದ್ಧತಿಯನ್ನು ಅಳವಡಿಸುವ ಬಗ್ಗೆ ಅಧ್ಯಯನ ಮಾಡತಕ್ಕದ್ದು.
2. ವಿವಿಧ ಕೃಷಿ ಹವಾಮಾನ ವಲಯದಲ್ಲಿ ಬೀಳುವ ಮಳೆ, ಹವಾಮಾನ ಮತ್ತು ಮಣ್ಣಿನ ಗುಣ ಲಕ್ಷಣಗಳ ಆಧಾರದ ಮೇಲೆ ಬೆಳೆ ವಿಷಯಕ್ಕೆ ಅಧ್ಯಯನ ಮಾಡತಕ್ಕದ್ದು.
3. ಚಾಲ್ತಿಯಲ್ಲಿರುವ ಹವಾಮಾನ ಆಧಾರಿತ ಬೆಳೆ ಯೋಜನೆಗೆ ಸೂಕ್ತ ಬದಲಾವಣೆಯನ್ನು ತಾಲ್ಲೂಕು ಅಥವಾ ಹೋಬಳಿ ಮಟ್ಟದಲ್ಲಿ ಅಳವಡಿಸಿಕೊಳ್ಳುವ ಕುರಿತು ಪರಿಶೀಲಿಸಿ ವರದಿ / ಶಿಫಾರಸ್ಸು ಮಾಡತಕ್ಕದ್ದು.

..3)

4. ಸಮಿತಿಯು ಸೂಕ್ತ ಬೆಳೆ ಯೋಜನೆಗೆ ಸಮರ್ಪಕವಾದ ತಾಂತ್ರಿಕ ಅಂಶಗಳ ಬಗ್ಗೆ ಅಧ್ಯಯನ ಮಾಡುವುದು ಮತ್ತು ಕೃಷಿ ವಲಯ ಮರು ಪರಿಶೀಲನೆಗೆ ಸೂಕ್ತ ಸಲಹೆ ನೀಡತಕ್ಕದ್ದು.
5. ಸಮಿತಿಯು ವಲಯವಾರು ಖುದ್ದು ಸ್ಥಳ ಪರಿಶೀಲನೆ ಮಾಡತಕ್ಕದ್ದು ಮತ್ತು ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಿ ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಿ, ನಂತರ ಕೈಗೊಳ್ಳಬೇಕಾದ ಕಾರ್ಯ ಯೋಜನೆ ರೂಪಿಸುವುದು. 6 ತಿಂಗಳ ಒಳಗಡೆ ಒಂದು ಮಧ್ಯಂತರ ವರದಿ ಸಲ್ಲಿಸುವುದು.
6. ಒಂದು ವರ್ಷದ ಕಾಲ ಮಿತಿಯಲ್ಲಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಅಲ್ಲದೆ, ತಾಂತ್ರಿಕ ಹಿನ್ನಲೆಯಲ್ಲಿ, ಸಮಿತಿಯು ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

1. "ಕೃಷಿ ಹವಾಮಾನ ಆಧಾರಿತ ಬೆಳೆ ಯೋಜನೆ" ಯನ್ನು ಹೋಬಳಿ ಮಟ್ಟಕ್ಕೆ ತಯಾರಿಸುವುದು.
2. ಬಿತ್ತನೆಯ ಅವಧಿ ಹಾಗೂ ಬೆಳೆಯುವ ಅವಧಿಯನ್ನು ಆಧರಿಸಿ "ಕೃಷಿ ಹವಾಮಾನ ಆಧಾರಿತ ಬೆಳೆ ಯೋಜನೆ" ಯನ್ನು ತಯಾರಿಸುವುದು.
3. ಹವಾಮಾನ ಮುನ್ಸೂಚನೆ / ಹವಾಮಾನ ಬದಲಾವಣೆಯಂತಹ ಅಂಶಗಳನ್ನು ಪರಿಗಣಿಸಿ ವಾಡಿಕೆ ಮಳೆ, ಅತಿವೃಷ್ಟಿ, ಅನಾವೃಷ್ಟಿ ತಡವಾಗಿ ಬಂದ ಮುಂಗಾರು ಮುಂತಾದ ಸ್ಥಿತಿಗಳಿಗೆ ಹೊಂದುವಂತಹ "ಕೃಷಿ ಹವಾಮಾನ ಆಧಾರಿತ ಬೆಳೆ ಯೋಜನೆ" ಯನ್ನು ತಯಾರಿಸುವುದು.
4. ಹವಾಮಾನ ಬದಲಾವಣೆಯನ್ನು (ವೈಪರಿತ್ಯಕ್ಕೆ) ಹೊಂದಿಕೊಂಡು ತನ್ನ ಶಕ್ತಿ ಇರುವಷ್ಟು ಇಳುವರಿ ಕೊಡುವ ಬೆಳೆಯ ಹಾಗೂ ತಳಿಯನ್ನು ಗುರುತಿಸಿ ಆಯಾ ಕೃಷಿ ವಲಯಕ್ಕೆ ಶಿಫಾರಸ್ಸು ಮಾಡುವುದು.
5. ಆಹಾರ ಪದ್ಧತಿಯನ್ನು ಪೂರೈಸುವ ಬೆಳೆಗಳನ್ನು ಆರಿಸಿ ಆಯಾ ಕೃಷಿ ಹವಾಮಾನ ವಲಯದಲ್ಲಿ ಅವುಗಳ ಸಮರ್ಥತೆಯ ಬಗ್ಗೆ ಸಲಹೆ ನೀಡಬಹುದು.
6. ಮಾರುಕಟ್ಟೆ ಆಧಾರಿತ ಬೆಳೆ ಬೆಳೆಯಲು ಸೂಕ್ತ ತಾಂತ್ರಿಕತೆ ಹಾಗೂ ತಳಿಗಳನ್ನು ಹವಾಮಾನ ವೈಪರೀತ್ಯದ ಪರಿಸ್ಥಿತಿಗೆ ಹೊಂದಿಕೊಳ್ಳಬಹುದಾದ ತಾಂತ್ರಿಕತೆಗಳ ಬಗ್ಗೆ ಸಲಹೆ ಮಾಡುವುದು.

ಸಮಿತಿಯ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಕನಿಷ್ಠ ಮಾನವ ಸಂಪನ್ಮೂಲ ಅನುದಾನ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಕೃಷಿ ಇಲಾಖೆಯ ವತಿಯಿಂದ ಒದಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B S Nagaratnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)
1/2/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1

..4)

2. ಪ್ರಧಾನ ಮಹಾಲೇಖಪಾಲರು (ಇ & ಆರ್. ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
9. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
10. ಆಯುಕ್ತರು, ರೇಷ್ಮೆ ಇಲಾಖೆ
11. ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು
12. ಸಂಶೋಧನಾ ನಿರ್ದೇಶಕರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ
13. ಸಂಶೋಧನಾ ನಿರ್ದೇಶಕರು, ತೋಟಗಾರಿಕೆ ವಿಶ್ವವಿದ್ಯಾಲಯ, ಬಾಗಲಕೋಟೆ
14. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ.
15. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
16. ನಿರ್ದೇಶಕರು, ತೋಟಗಾರಿಕೆ ಇಲಾಖೆ
17. ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ
18. ಅಪರ ನಿರ್ದೇಶಕರು (ಬೆಳೆ ಅಭಿವೃದ್ಧಿ ಮತ್ತು ಯೋಜನೆ), ಕೃಷಿ ಆಯುಕ್ತರ ಕಾರ್ಯಾಲಯ
19. ಶ್ರೀ ರಾಜೇಗೌಡ, ಸಮನ್ವಯಾಧಿಕಾರಿ, ಕೃಷಿ ಸಚಿವಾಲಯ
20. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು
21. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
22. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ (ವೆಚ್ಚ), ವಿಧಾನ ಸೌಧ, ಬೆಂಗಳೂರು.
23. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ. ಬೆಂಗಳೂರು.
24. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
25. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
26. ಸರ್ಕಾರದ ಉಪ ಕಾರ್ಯದರ್ಶಿ-1 & 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
27. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

(ಕ್ರಮ ಸಂಖ್ಯೆ: 10 ರಿಂದ 18ರ ವರೆಗೆ ಕೃಷಿ ಆಯುಕ್ತರ ಮೂಲಕ)